## 1 ನೇ ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ ಶಿರಸಿ

**ಸತ್ಯ ಪ್ರತಿಜ್ಞೆಯ ಮೇರೆಗೆ ಃ ದಿನಾಂಕ ಃ 04.02.2020**

ಸಾಕ್ಷಿದಾರರ ಹೆಸರು – ಸುಬ್ರಾಯ ಶೇರುಗಾರ
ತಂದೆಯ ಹೆಸರು – ಮಂಜು ಶೇರುಗಾರ
ವಯಸ್ಸು – 58 ವರ್ಷ
ಉದ್ಯೋಗ – ಎಸ್.ಡಿ.ಸಿ. ಪಟ್ಟಣ ಪಂಚಾಯತಿ ಯಲ್ಲಾಪುರ
ವಾಸ್ತವ್ಯ – ಶಿರಸಿ.

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ**

ನಾನು ಶಿರಸಿಯ ನಗರ ಸಭೆಯಲ್ಲಿ 1983 ರಿಂದ 2017 ರವರೆಗೆ ಶಿರಸಿ ನಗರ ಸಭೆಯಲ್ಲಿ ಎಸ್.ಡಿ.ಸಿ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಈಗ ತೋರಿಸಿದ ದಿನಾಂಕ 03.12.2014 ರ ಪಂಚನಾಮೆಯಲ್ಲಿರುವ ಸಹಿ ನನ್ನದೇ. 2 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದ ಸಿಸಿ ನಂಃ416/2019 ರಲ್ಲಿ ನಿ.ಪಿ. 15 ಎಂದು ಈಗಾಗಲೇ ಗುರುತಿಸಿರುವ ಮೂಲ ಪಂಚನಾಮೆಯನ್ನು ಈ ಪ್ರಕರಣದಲ್ಲಿ ತರಿಸಿಕೊಂಡಿದ್ದು ಇದನ್ನು ಈ ಪ್ರಕರಣದ ನಿ.ಪಿ. 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 3(ಎ) ಎಂದು ಗುರುತಿಸಲಾಯಿತು. ಈ ಸಹಿಯನ್ನು ನಾನು ದಿನಾಂಕ 03.12.2014 ರಂದು ಮಾಡಿರುತ್ತೇನೆ. ಆ ದಿನ ಪೋಲೀಸರು ನನ್ನನ್ನು ಮತ್ತು ಚಾ .ಸಾ. 5 ರವರನ್ನು ಪಂಚರನ್ನಾಗಿ ಬರಲು ಠಾಣೆಗೆ ಕರೆಸಿಕೊಂಡಿದ್ದರು. ನಾವು ಠಾಣೆಗೆ ಹೋದಾಗ ಅಲ್ಲಿ ಈ ಪ್ರಕರಣದ ಈಗ ನ್ಯಾಯಾಲಯದ ಮುಂದೆ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿರುವ ಆರೋಪಿಗಳು ಇದ್ದರು . ಆರೋಪಿಗಳು ಕಳ್ಳತನದ ಪ್ರಕರಣದಲ್ಲಿ ಭಾಗಿಯಾಗಿದ್ದು ಅವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಬೇಕಾಗಿದ್ದು ಅದಕ್ಕೆ ನಮ್ಮನ್ನು ಸಾಕ್ಷಿಗಳಾಗಿ ಇರುವಂತೆ ಕೇಳಿದರು , ನಾವು ಒಪ್ಪಿದೆವು. ಅಲ್ಲಿದ್ದ ಇಬ್ಬರು ಆರೋಪಿಗಳ ಹೆಸರು ಮಂಜುನಾಥ ಅಗಸ್ತ್ಯನವರ್ ಮತ್ತು ಮಂಜುನಾಥ ಗವಾಡಿ ಎಂದು ತಿಳಿಸಿದರು. ಆರೋಪಿಗಳು ತಾವು ಕಳ್ಳತನ ಮಾಡಿರುವ ಸ್ಥಳಗಳನ್ನು ತೋರಿಸುವುದಾಗಿ ಹೇಳಿದ ಮೇರೆಗೆ ಪೋಲೀಸ್ ಜೀಪ್‌ನಲ್ಲಿ ನಮ್ಮನ್ನು ಆರೋಪಿಗಳೊಂದಿಗೆ ಪೋಲೀಸರು ಆರೋಪಿಗಳು ಹೇಳಿದ ಕಡೆಗೆ ಕರೆದುಕೊಂಡು ಹೊರಟರು.

ಮೊದಲು ಆರೋಪಿಗಳು ತೋರಿಸಿದಂತೆ ಹಾರುಗಾರ್ ಗೆ ಕರೆದುಕೊಂಡು ಹೋಗಿ ಅಲ್ಲಿ ಆರೋಪಿಗಳು ಒಂದು ಮನೆಯನ್ನು ತೋರಿಸಿ ಆ ಮನೆಯ ಬೀಗ ಒಡೆದು ಕಪಾಟಿನಲ್ಲಿ ಇದ್ದ ಬಂಗಾರ ಕಳ್ಳತನ ಮಾಡಿರುವುದಾಗಿ ತೋರಿಸಿದರು. ನಂತರ ಅಲ್ಲಿಂದ ಆರೋಪಿಗಳು ಎಲ್ಲರನ್ನೂ ಜವಳಿ ರೈಸ್ ಮಿಲ್ ಹಿಂಭಾಗಕ್ಕೆ ಸುವರ್ಣ ಕೋ .ಆಪರೇಟಿವ್ ಬ್ಯಾಂಕ್ ನ ಹಿಂಭಾಗದಲ್ಲಿ ಇರುವ ಒಂದು ಮನೆಗೆ ಕರೆದುಕೊಂಡು ಹೋದರು . ಅಲ್ಲಿಯೂ ಸಹ ಮನೆಯ ಬಾಗಿಲು ಹಾಗೂ ಕಪಾಟು ಒಡೆದು ಬಂಗಾರ ಕಳ್ಳತನ ಮಾಡಿರುವುದಾಗಿ ತೋರಿಸಿದರು. ನಂತರ ಅಲ್ಲೇ ಹತ್ತಿರದಲ್ಲಿದ್ದ ಸ್ಟಾರ್ ಲೈನ್‌ರವರ ಮನೆಗೆ ಕರೆದುಕೊಂಡು ಹೋದರು. ಅದು ಮೊದಲ ಮಹಡಿಯಲ್ಲಿತ್ತು. ಅಲ್ಲೂ ಸಹ ಆರೋಪಿಗಳು ಕಳ್ಳತನ ಮಾಡಿರುವುದಾಗಿ ತೋರಿಸಿದರು. ಆ ಮನೆ ಬೀಗ ಹಾಕಿದ್ದು ನಾವು ಒಳಗೆ ಹೋಗಲಿಲ್ಲ. ಅಲ್ಲಿ ಯಾರೂ ಇರಲಿಲ್ಲ.

ನಂತರ ಆರೋಪಿಗಳು ಹೇಳಿದಂತೆ ಪೋಲೀಸ್ ಜೀಪ್ನಲಿ ಎಲ್ಲರೂ ಕೆ .ಹೆಚ್.ಬಿ. ಕಾಲೋನಿಯ ಒಂದು ಆರ್.ಸಿ.ಸಿ. ಮನೆಯ ಹತ್ತಿರ ಬಂದೆವು. ಆ ಮನೆಯಲ್ಲಿಯೂ ಸಹ ಆರೋಪಿಗಳು ಮನೆಯ ಹಿಂದಿನ ಬಾಗಿಲಿನಿಂದ ಬಾಗಿಲು ಒಡೆದು ಒಳಗೆ ಹೋಗಿ ಒಂದು ಬಾಕ್ಸ್ ನಲ್ಲಿ ಇದ್ದ ನಗದು ಹಣ ಕಳ್ಳತನ ಮಾಡಿರುವುದಾಗಿ ಹೇಳಿದರು . ಆ ಮನೆಯಲ್ಲಿ ಒಬ್ಬರು ಮಹಿಳೆ ಇದ್ದು ಒಂದು ಬಾಕ್ಸನ್ನು ತೋರಿಸಿದರು.

ನಂತರ ಆರೋಪಿಗಳನ್ನು ಕದ್ದ ಒಡವೆಗಳನ್ನು ಏನು ಮಾಡಿದ್ದೀರಿ ಎಂದು ಪೋಲೀಸರು ಕೇಳಿದಾಗ ಅವರು ತಾವು ಮಾರಾಟ ಮಾಡಿರುವ ಬಂಗಾರದ ಅಂಗಡಿಗಳನ್ನು ತೋರಿಸುವುದಾಗಿ ಹೇಳಿ ನಮ್ಮನ್ನು ದೇವಿಕೆರೆ ಸರ್ಕಲ್‌ನಲ್ಲಿ ಇರುವ ಮಾರಿಕಾಂಬಾ ಜ್ಯುವೆಲರ್ಸ್‌ಗೆ ಕರೆದುಕೊಂಡು ಬಂದರು. ಅಲ್ಲಿ ಒಡವೆಗಳನ್ನು ಮಾರಾಟ ಮಾಡಿರುವುದಾಗಿ ಹೇಳಿದರು . ಆ ಅಂಗಡಿ ಬಾಗಿಲು ಹಾಕಿತ್ತು. ನಂತರ ಆರೋಪಿಗಳು ಹೊಸಪೇಟೆ ಸರ್ಕಲ್‌ನಲ್ಲಿ ಇರುವ ಸುವರ್ಣ ಜ್ಯುವೆಲರ್ಸ್ ಗೆ ಕರೆದುಕೊಂಡು ಹೋಗಿ ಅಲ್ಲೂ ಸಹ ಮಾರಾಟ ಮಾಡಿರುವುದಾಗಿ ತಿಳಿಸಿದರು . ಆ ಅಂಗಡಿ ಸಹ ಬಾಗಿಲು ಹಾಕಿತ್ತು. ಪೋಲೀಸರು ಪಂಚನಾಮೆ ಬರೆದು ನಮ್ಮ ಸಹಿ ತೆಗೆದುಕೊಂಡರು . ಆ ದಿನ ಠಾಣೆಯಲ್ಲಿ ತೋರಿಸಿ ಕಳ್ಳತನ ಮಾಡಿರುವ ಜಾಗಗಳನ್ನು ತೋರಿಸಿರುವ ಆರೋಪಿಗಳೇ ಈ ದಿನ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿರುವ ಆರೋಪಿಗಳಾಗಿರುತ್ತಾರೆ ಎಂದು ಸಾಕ್ಷಿಯು ಇಬ್ಬರು ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀಮತಿ ಜಿ.ಕೆ.ಎನ್. ವಕೀಲರಿಂದಃ**

ಪಂಚನಾಮೆಗಾಗಿ ನಮ್ಮನ್ನು ಪೋಲೀಸರೇ ಬಂದು ಕರೆದಿದ್ದರು . ಆ ದಿನ ನಾನು ನಗರ ಸಭೆಯ ಕರ್ತವ್ಯದಲ್ಲಿ ಇದ್ದೆ. ಪೋಲೀಸರು ಬಂದು ಕರೆದಾಗ ಮಧ್ಯಾಹ್ನ ಸುಮಾರು 2.00 ರಿಂದ 2.30 ರ ಸಮಯ ಆಗಿತ್ತು. ನಗರ ಸಭೆಯ ಕಛೇರಿಯಲ್ಲಿ ಆ ದಿನ ಚಲನ - ವಲನ ಪುಸ್ತಕ ಇರಲಿಲ್ಲ. ಸಾಮಾನ್ಯವಾಗಿ ಎಲ್ಲಾ ಕಛೇರಿಗಳಲ್ಲಿಯೂ ಚಲನ ವಲನ ಪುಸ್ತಕ ಇಟ್ಟಿರುತ್ತಾರೆ ಎಂದರೆ ಸರಿ. ಆ ದಿನ ನಗರ ಸಭೆ ಕಛೇರಿಯಲ್ಲಿ ಚಲನ ವಲನ ಪುಸ್ತಕ ಇರಲಿಲ್ಲ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಹೋಗುವಾಗ ನಮ್ಮ ಮೇಲಧಿಕಾರಿಗಳ ಅನುಮತಿ ಪಡೆದು ಹೋಗಿದ್ದೆ. ನಮ್ಮನ್ನು ಕರೆಯಲು ಒಬ್ಬರು ಪೋಲೀಸರು ಮಾತ್ರ ಬಂದಿದ್ದರು . ಅವರ ಹೆಸರು ಗೊತ್ತಿಲ್ಲ. ಆ ಸಮಯದಲ್ಲಿ ಮಹೇಂದ್ರಕುಮಾರು ಎಂಬುವವರು ನಗರ ಸಭೆ ಕಮೀಷನರ್ ಆಗಿದ್ದರು . ಪೋಲೀಸರು ನಮ್ಮನ್ನು ಕರೆಯಲು ಜೀಪ್ ನಲ್ಲಿ ಬಂದಿದ್ದರು. ನಾನು ಮತ್ತು ಪೋಲೀಸರು ಇಬ್ಬರೇ ಹೋಗಿದ್ದೆವು. ಜೀಪ್‌ನಲ್ಲಿ ಪೋಲೀಸರು, ನಾನು ಮತ್ತು ಡ್ರೈವರ್ ಇದ್ದೆವು . ನೇರವಾಗಿ ನನ್ನನ್ನು ಪೋಲೀಸರು ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. 2.35 ರಿಂದ 2.40 ರ ಸಮಯಕ್ಕೆ ನಾನು ಪೋಲೀಸ್ ಠಾಣೆ ತಲುಪಿದ್ದೆ . ಪೋಲೀಸ್ ಠಾಣೆಯಲ್ಲೇ ನಮಗೆ ಆರೋಪಿಗಳನ್ನು ತೋರಿಸಿದ್ದರು. ಠಾಣೆಯಿಂದ ನೇರವಾಗಿ ಹಾರುಗಾರ ಅಲ್ಲಿಗೆ ಹೋದೆವು. ಮಧ್ಯೆ ಎಲ್ಲೂ ಜೀಪ್ ನಿಲ್ಲಿಸಲಿಲ್ಲ. ಠಾಣೆಯಿಂದ ಹಾರುಗಾರ ತಲುಪಲು ಸುಮಾರು 15-20 ನಿಮಿಷ ಬೇಕಾಯಿತು. ನಾವು ಹೋಗಿದ್ದ ಪೋಲೀಸ್ ಜೀಪ್ ನಂಬರ್ ಹೇಳಲು ಬರುವುದಿಲ್ಲ . ಅಲ್ಲಿ ಮೊದಲು ಒಂದು ಸ್ಮಶಾನದ ಎದುರು ಇದ್ದ ಒಂದು ಆರ್ .ಸಿ.ಸಿ. ಮನೆಯನ್ನು ತೋರಿಸಿ ಆ ಮನೆಯ ಒಳಗೆ ಕಪಾಟಿನಿಂದ ಕಳ್ಳತನ ಮಾಡಿರುವುದಾಗಿ ತೋರಿಸಿದರು. ಆ ಮನೆಯ ಚತುರ್ಗಡಿ ನಿಖರವಾಗಿ ಹೇಳಲು ಆಗುವುದಿಲ್ಲ. ಆರೋಪಿಗಳು ಮನೆಯ ಬಾಗಿಲು ಮುರಿದಿದ್ದು ಮತ್ತು ಕಪಾಟು ಮುರಿದಿದ್ದು ತೋರಿಸಿ ಅಲ್ಲಿ ಕಳ್ಳತನ ಮಾಡಿರುವುದಾಗಿ ಹೇಳಿದ್ದರು . ಕಪಾಟು ಉತ್ತರ ದಿಕ್ಕಿಗೆ ಮುಖವಾಗಿ ಇತ್ತು. ಮನೆಯಲ್ಲಿ ಒಬ್ಬರು ಮಹಿಳೆ ಇದ್ದರು . ಅಲ್ಲಿ ಪೋಲೀಸರು ಫೋಟೋ ತೆಗೆದುಕೊಂಡರು, ಮತ್ತೆ ಏನೂ ಮಾಡಲಿಲ್ಲ . ಹನುಮಂತಿಯಿಂದ ಜವಳಿ ರೈಸ್ ಮಿಲ್ ಕಡೆ ಹೋಗಲು 3 ರಸ್ತೆಗಳು ಇವೆ ಎಂದರೆ ಸರಿ . ನಾವು ರಾಯರಪೇಟೆ ಮೂಲಕ ಹೋದೆವು. ನಾವು ಜವಳಿ ರೈಸ್‌ಮಿಲ್ ಹತ್ತಿರ ತಲುಪಿದಾಗ ಅಂದಾಜು 3.30 ಗಂಟೆ ಆಗಿರಬಹುದು, ಸರಿಯಾಗಿ ನೆನಪಿಲ್ಲ. ಜವಳಿ ರೈಸ್‌ಮಿಲ್ ಹತ್ತಿರ ಅಂದರೆ ಸಾಕಷ್ಟು ಜನ ಸಂದಣಿ ಇರುವ ಪ್ರದೇಶ ಎಂದರೆ ಸರಿ.ಅಲ್ಲಿ 1 ಎಕರೆ ಜಾಗದಲ್ಲಿ ಒಂದು ರೈಸ್ ಮಿಲ್ ಇದೆ ಎಂದರೆ ಸರಿ . ಅಲ್ಲಿ ಆರೋಪಿಯನ್ನು ಕೇಳಿದಾಗ ಆರೋಪಿ ಒಂದು ಆರ್ .ಸಿ.ಸಿ. ಮನೆ ತೋರಿಸಿರುತ್ತಾರೆ. ಆ ಮನೆಯ ಮಾಲೀಕರು

ಯಾರು ಎಂದು ಗೊತ್ತಿಲ್ಲ. ಆ ಮನೆ ಕೇವಲ ನೆಲ ಮಹಡಿ ಮಾತ್ರ ಇರುವ ಮನೆಯಾಗಿತ್ತು. ಆ ಮನೆಯಲ್ಲಿ ವಯಸ್ಸಾಗಿರುವ ಒಬ್ಬರು ಮಹಿಳೆ ಇದ್ದರು. ನಾನು ಆ ದಿನ ಪೋಲೀಸರು ಬಂದು ಕರೆದಿದ್ದರು ಮತ್ತು ನಾನು ಪೋಲೀಸರೊಂದಿಗೆ ಹಾರುಗಾರ , ಹನುಮಂತಿ ಮತ್ತು ಜವಳಿ ರೈಸ್ ಮಿಲ್ ಹತ್ತಿರ ಹೋಗಿದ್ದೆವು ಎಂದು ಹೇಳುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಆ ದಿನ ಕರ್ತವ್ಯದಲ್ಲಿ ಇದ್ದೆ ಎಂದು ಹೇಳುವ ವಿಚಾರ ಸುಳ್ಳು ಎಂದರೆ ಸರಿಯಲ್ಲ . ನಾನು ನಗರ ಸಭೆಯಲ್ಲಿದ್ದಾಗ ಕಛೇರಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊದಲು ಒಂದು ಬಾರಿ ಮಾತ್ರ ನ್ಯಾಯಾಲಯಕ್ಕೆ ಬಂದಿದ್ದೆ. ನಗರ ಸಭೆಯಲ್ಲಿ ಸುಮಾರು 30 ಜನ ಕಛೇರಿ ಸಿಬ್ಬಂದಿ ಇರಬಹುದು. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿದೆ. ಅದನ್ನು ಪೋಲೀಸರು ಓದಿ ಹೇಳಿದ್ದರು, ನಂತರ ಸಹಿ ಮಾಡಿದ್ದೆ.

ಜವಳಿ ರೈಸ್ ಮಿಲ್ ನಂತರ ಮತ್ತೊಂದು ಮನೆ ತೋರಿಸಿ ಸುಮಾರು 15 ನಿಮಿಷದಲ್ಲಿ ಕೆ.ಹೆಚ್.ಬಿ. ಕಾಲೋನಿಯ ಇನ್ನೊಂದು ಮನೆಯ ಹತ್ತಿರ ಹೋದೆವು. ಅದೂ ಸಹ ಆರ್.ಸಿ.ಸಿ. ಮನೆಯಾಗಿತ್ತು. ಆ ಮನೆಯಲ್ಲೂ ಸಹ ಒಬ್ಬರು ಮಹಿಳೆ ಇದ್ದರು . ಅಲ್ಲೂ ಸಹ ಆರೋಪಿಗಳು ಕಳ್ಳತನ ಮಾಡಿರುವುದಾಗಿ ಹೇಳಿದರು. ಆ ಮನೆಯಲ್ಲಿ ನಗದು ಹಣ ಕಳ್ಳತನ ಮಾಡಿರುವುದಾಗಿ ಹೇಳಿದರು. ಎಷ್ಟು ಹಣ ಎಂದು ಹೇಳಲಿಲ್ಲ. ಮನೆಯ ಹಿಂದಿನ ಬಾಗಿಲಿನ ತಗಡು ಮುರಿದು ಒಳಗೆ ಹೋಗಿ ಕಳ್ಳತನ ಮಾಡಿರುವುದಾಗಿ ಹೇಳಿದರು. ಆ ಮನೆಯಲ್ಲಿ ಸುಮಾರು 10-15 ನಿಮಿಷ ಇದ್ದೆವು. ನಂತರ ಆರೋಪಿಗಳನ್ನು ಕಳ್ಳತನ ಮಾಡಿದ ವಸ್ತುಗಳನ್ನು ಏನು ಮಾಡಿದಿರಿ ಎಂದು ಕೇಳಿದಾಗ ಅದನ್ನು ಮಾರಾಟ ಮಾಡಿದ್ದೇವೆ ಎಂದು ಹೇಳಿದರು . ಅಲ್ಲಿಂದ ಜೀಪು ಹತ್ತುವಾಗ ಪೋಲೀಸರು, ಡ್ರೈವರ್, ನಾನು ಮತ್ತು ಆರೋಪಿಗಳು ಇದ್ದೆವು. ಅಲ್ಲಿಂದ ಮಾರಿಕಾಂಬಾ ಜ್ಯುವೆಲರ್ಸ್ ಹತ್ತಿರ ಕರೆದುಕೊಂಡು ಬಂದರು. ಅಲ್ಲಿಗೆ ಬಂದಾಗ ಸಮಯ ಸುಮಾರು 4.15 ಆಗಿತ್ತು. ಎಲ್ಲರೂ ಜೀಪಿನಿಂದ ಇಳಿದು ಬಂದು ನೋಡಿದೆವು . ಆ ಅಂಗಡಿ ಬಾಗಿಲು ಹಾಕಿತ್ತು . ಆರೋಪಿಗಳು ಇನ್ನೊಂದು ಅಂಗಡಿಯಲ್ಲಿ ಮಾರಾಟ ಮಾಡಿರುವುದಾಗಿ ಹೇಳಿದರು. ಅಲ್ಲಿಂದ ಅಶ್ವಿನಿ ಸರ್ಕಲ್ ಹತ್ತಿರ ಇರುವ ಸುವರ್ಣ ಜ್ಯುವೆಲರ್ಸ್‌ಗೆ ಬಂದೆವು. ಅದೂ ಸಹ ಬಾಗಿಲು ಹಾಕಿತ್ತು. ಆಗ ಸುಮಾರು 4.30 ರ ಸಮಯ ಆಗಿರಬಹುದು. ಪೋಲೀಸರು ಪ್ರತಿ ಜಾಗದಲ್ಲೂ ಪಂಚನಾಮೆ ಬರೆದುಕೊಳ್ಳುತ್ತಾ ಬಂದಿದ್ದರು. ಕೆಳಗಡೆ ನಿಂತುಕೊಂಡು ಬರೆಯುತ್ತಿದ್ದರು . ಪ್ರತಿ ಸ್ಥಳದಲ್ಲೂ ಪಂಚನಾಮೆ ಬರೆದಾಗ ನಮ್ಮ ಸಹಿ ಪಡೆಯಲಿಲ್ಲ . ಕೊನೆಯಲ್ಲಿ ಸಹಿ ಪಡೆದರು . ಸುವರ್ಣ ಜ್ಯುವೆಲರ್ಸ್ ಹತ್ತಿರವೂ ಸಹ ನಿಂತುಕೊಂಡು ಪಂಚನಾಮೆ ಬರೆದರು . ಸುವರ್ಣ ಜ್ಯುವೆಲರ್ಸ್ ಹತ್ತಿರ ಪಂಚನಾಮೆಗೆ ಸಹಿ ತೆಗೆದುಕೊಂಡರು. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂಬ ವಿಚಾರ ಗೊತ್ತಿತ್ತು . ಅದನ್ನು

ನೋಡಿಯೇ ಸಹಿ ಮಾಡಿದ್ದೆ. ನಾನು ಪೋಲೀಸರೊಂದಿಗೆ ಈ ಎಲ್ಲಾ ಜಾಗಗಳಿಗೆ ಹೋಗಿದ್ದೆ ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಮಗೂ ಹಾಗೂ ಪೋಲೀಸರಿಗೂ ಸಾಮಾನ್ಯವಾಗಿ ಗುರುತು ಪರಿಚಯ ಇರುತ್ತದೆ ಎಂದರೆ ಸರಿ. ನಾನು ಪೋಲೀಸರು ತಯಾರಿಸಿಕೊಂಡು ಬಂದ ಪಂಚನಾಮೆಗೆ ಅವರ ಒಡನಾಟ ಇರುವ ನಾತೆಯಿಂದ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಈ ಯಾವುದೇ ಸ್ಥಳಗಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ . ಆ ದಿನ ಆರೋಪಿಗಳು ಇದ್ದು ಈ ಎಲ್ಲಾ ಜಾಗಗಳನ್ನು ತೋರಿಸಿದ್ದರು ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

( ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**1 ನೇ ಹೆ.ಪ್ರ.ದ.ನ್ಯಾ.ದಂ., ಶಿರಸಿ.**